# ಜೀವನಚಕ್ರದಲ್ಲಿ ಮತ್ತೆ ವಸಂತದ ಸುಳಿವು

'ಕಡೇ ಪಕ್ಷ ನಿಮ್ಮ ಅಸಿಡಿಟಿಯನ್ನಾದರೂ ಪರೀಕ್ಷಿಸಿಕೊಳ್ಳಿ' ಎಂದೆ. ಅವರು ತುಂಬಾ ರೇಗಿದ, 'ನನಗ್ಯಾವ ಕಾಯಿಲೆ ಇಲ್ಲ. ನಾನು ಚೆನ್ನಾಗಿದ್ದೇನೆ. ನಾನು ರೇಪಿಸ್ಟ್ ಅಲ್ಲ. ನನಗೆ ಯಾವ ವೈದ್ಯರ ಅಗತ್ಯವಿಲ್ಲ.'

ನಾನು ಅವನನ್ನೇ ನೋಡಿದೆ: ಅಬ್ರಾಹಮ್ ನೀಳ ಕಾಯದ, ಸುಂದರ ಮೈಕಟ್ಟಿನ, ದಷ್ಟಪುಷ್ಟ, ಆಕರ್ಷಕ ವ್ಯಕ್ತಿಯಾಗಿದ್ದ. ವಾಸ್ತವವಾಗಿ ಅವನು ಯಾವ ದೃಷ್ಟಿಯಿಂದಲೂ ಒಬ್ಬ ರೋಗಿಯೆಂದು ಅನ್ನಿಸುತ್ತಿರಲಿಲ್ಲ. ಪತಿಯ ಸೌಂದರ್ಯ ಸಹ ಪತ್ನಿಯರಿಗೆ ಒಂದು ಸಮಸ್ಯೆಯಾಗುತ್ತದೆ. ನಾನೂ ಸಹ ಅದೆಷ್ಟೋ ಮಹಿಳೆಯರು ಅಬ್ರಾಹಮ್‌ನನ್ನು ನೋಡಿ ಮೈಮರೆತದ್ದನ್ನು ನೋಡಿದ್ದೆ. ಅದೆಷ್ಟೋ ಮಹಿಳೆಯರು, 'ನಿಮ್ಮ ಹಸ್ಬೆಂಡ್ ತುಂಬಾ ಸುಂದರವಾಗಿದ್ದಾರೆ, ತುಂಬಾ ಅದ್ಭುತವಾಗಿದ್ದಾರೆ' ಎಂದು ನನಗೆ ಹೇಳುತ್ತಿದ್ದರು.

ಮನುಷ್ಯ ಶರೀರದಿಂದ ಮಾತ್ರ ರೋಗಿಯಾಗುವುದಿಲ್ಲ, ಮೆದುಳು, ಆತ್ಮ, ಆಚಾರ ವಿಚಾರಗಳಿಂದಲೂ ರೋಗಿಗಳಾಗುತ್ತಾರೆ. ಆದರೆ ಅಬ್ರಾಹಮ್‌ಗೆ ತಿಳಿ ಹೇಳುವವರು ಯಾರು? ನಾನು ನನ್ನನ್ನು ತುಂಬಾ ಅಸಹಾಯಕಿ, ದುರ್ಬಲೆ ಮತ್ತು ಭಯಭೀತಳೆಂದು ಮನಗಾಣುತ್ತಿದ್ದೆ; ಇದರಿಂದ ನನ್ನಿಡೀ ದೇಹ ಕಂಪಿಸುತ್ತಿತ್ತು. ಭಯದಿಂದಾಗಿ ಎದೆ ಬಡಿದುಕೊಳ್ಳುತ್ತಿತ್ತು. ಅವನು ಬಲಾತ್ಕಾರಿ ಅಲ್ಲ, ಆದರೆ ಅನೇಕ ಮಹಿಳೆಯರೊಂದಿಗೆ ಅವನ ಲೈಂಗಿಕ ಸಂಪರ್ಕವಿದೆ.

ಇಂಥ ಮನುಷ್ಯನಿಗೆ ಏನು ಹೇಳುವುದು? ನನ್ನ ಕೆಲವು ಪ್ರಶ್ನೆಗಳಿಗೆ ಉತ್ತರ ನನಗೆಂದೂ ಸಿಗಲಿಲ್ಲ.

***

ಅಬ್ರಾಹಮ್ ಮತ್ತು ನನ್ನ ವಿವಾಹ ಎಂಥ ವಯಸ್ಸಿನಲ್ಲಿ ನಡೆದಿತ್ತೆಂದರೆ, ಆಗ ನಾವು ಪರಸ್ಪರರ ಅಗತ್ಯಗಳು ಮತ್ತು ಭಾವನೆಗಳನ್ನು ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಆದರೂ ನಾನು ಅವನನ್ನು ಮೊದಲ ಬಾರಿಗೆ ಭೇಟಿಯಾದಾಗ, ತುಂಬಾ ಉತ್ಸಾಹ ಮತ್ತು ಭಾವೋತ್ಕರ್ಷಕ್ಕೆ ಒಳಗಾಗಿದ್ದೆ. ಅವನ ಯೋಚನೆಯಲ್ಲಿಯೇ ಕಳೆದುಹೋಗಿದ್ದೆ. ನಮ್ಮ ಪ್ರೀತಿ ನಮ್ಮನ್ನು ಉತ್ತಮ ಭವಿಷ್ಯಕ್ಕೆ ಕರೆದೊಯ್ಯುವುದು ಎಂದು ಯೋಚಿಸಿದ್ದೆ. ಆದರೆ ಇಂದು, ನಾನೇಕೆ ಅವನನ್ನು ಭೇಟಿಯಾದೆ, ಅವನ ಹೆಂಡತಿ ಏಕಾದೆ, ನಾನೆಷ್ಟು ಮೂರ್ಖಳು ಎಂದು ಯೋಚಿಸುತ್ತೇನೆ.

ನಾವು ಜೊತೆಯಲ್ಲಿದ್ದಾಗ್ಯೂ, ಬದುಕಿನ ಎರಡು ಪ್ರತ್ಯೇಕ ಪರಿಧಿಯಲ್ಲಿ ಸುತ್ತು ಹಾಕುತ್ತಿದ್ದೆವು. ನಮ್ಮ ನಡುವೆ ವಿಚಿತ್ರ ಸಂಬಂಧವೇರ್ಪಟ್ಟಿತ್ತು, ಅಲ್ಲಿ ಇರುವುದೂ ಕಷ್ಟವಾಗಿತ್ತು, ಅಲ್ಲಿಂದ ಹೊರ ಬರುವುದು ಸಹ ಸುಲಭವಾಗಿರಲಿಲ್ಲ. ಮೌರೀನ್ ನನ್ನ ಮೆದುಳಿಗೆ ಲೈಂಗಿಕ ವಿಕೃತಿಯ ಮಾತನ್ನು ಹಾಕಿದ್ದರು. ನಾನು ಪ್ರಾಮಾಣಿಕಳಾಗಿದ್ದೆ. ನಾನು ಅಬ್ರಾಹಮ್‌ನನ್ನು ಹೊರತುಪಡಿಸಿ ಬೇರಾವ ಪುರುಷನನ್ನು ಭೇಟಿಯಾಗಲಿಲ್ಲ; ಎಂದೂ, ಯಾರೊಂದಿಗೆ ಮನೆಯಿಂದ ಹೊರಗೆ ಹೋಗಲಿಲ್ಲ. ಆದರೆ ನಾನು ಆ ಟೆಸ್ಟ್ ಮಾಡಿಸಿಕೊಳ್ಳಬೇಕಾಯಿತು; ಏಕೆಂದರೆ ನನ್ನ ಪತಿಯ ವರ್ತನೆ ಸರಿಯಿಲ್ಲ. ಈಗ ನನಗೆ ಅವನ ಬಗ್ಗೆ ಕುತೂಹಲ, ಆಸಕ್ತಿ ಮತ್ತು ಪ್ರೀತಿಯ ಬದಲು, ಪರಕೀಯತೆ ಮತ್ತು ಜುಗುಪ್ಸೆ ಮೂಡಿತ್ತು. ಅವನು ಸಾಯುವವರೆಗೂ, ನನಗೆ ಅವನ ಬಗ್ಗೆ ಜುಗುಪ್ಸೆ ಇರುವುದು. ಅವನಿಗೂ ನನ್ನ ಬಗ್ಗೆ ಎಂದೂ ಪ್ರೀತಿ ಮೂಡಲಿಲ್ಲ ಎಂದು ವಾದಿಸಬಲ್ಲೆ. ಜಗತ್ತಿಗೆ ತೋರಿಸಲು ಅವನಿಗೊಬ್ಬಳು ಹೆಂಡತಿ ಬೇಕಿತ್ತು. ಅವನಿಗೊಂದು ತೆರೆಮರೆ ಬೇಕಿತ್ತು, ಅಲ್ಲಿ ಅವನು ಅಡಗಿದ್ದು, ತನ್ನ ತಪ್ಪು ಕೆಲಸಗಳನ್ನು

